# ದತ್ತೂರ



ಮಳೆ ಬೀಳುತ್ತಿದ್ದಂತೆಯೇ ಒಣ ಮಣ್ಣಿರುವಲ್ಲಿ ಸಾಮಾನ್ಯವಾಗಿ ಬೇಲಿ ಬದಿಗಳಲ್ಲಿ ಗುಂಪಾಗಿ ಬೆಳೆಯುವ ಅಗಲ ಎಲೆಗಳುಳ್ಳ ಈ ಸಸ್ಯದಲ್ಲಿ ಬಿಳಿಬಣ್ಣದ ಕೊಳವೆಯಾಕಾರದ ತುತ್ತೂರಿಯಂತಿರುವ ಸುಂದರ ಹೂವುಗಳಿರುತ್ತವೆ. ಆಕರ್ಷಕ ಹೂವುಗಳಿಂದ ಎಲ್ಲರನ್ನೂ ತನ್ನತ್ತ ಸೆಳೆಯುವ ಈ ಸಸ್ಯವನ್ನು ಕನ್ನಡದಲ್ಲಿ ಉಮ್ಮತ್ತನ ಗಿಡ ಎನ್ನುತ್ತಾರೆ. ಸಂಸ್ಕೃತದಲ್ಲಿ ದತ್ತೂರ ಎನ್ನಲಾಗುವ ಇದನ್ನು ಸ್ಥಳೀಯವಾಗಿ ತುತ್ತೂರಿ ಗಿಡ, ಉಮ್ಮಕ್ಕ ಎಂದೂ ಕರೆಯುತ್ತಾರೆ.

ಹಿಂದಿಯ 'ಧಾತೂರ' ಶಬ್ದದಿಂದ ಹುಟ್ಟಿಕೊಂಡಿದೆ ದತ್ತೂರ ಎನ್ನುವ ಹೆಸರು. ಇದು ಉತ್ತಮ ಬಾವು ಹಾಗೂ ನೋವು ನಿವಾರಕವಾಗಿ ಕೆಲಸ ಮಾಡುತ್ತದೆ. ಏಪ್ರಿಲ್–ಮೇ ತಿಂಗಳಲ್ಲಿ ತನ್ನಿಂದ ತಾನೇ ಹುಟ್ಟಿಕೊಳ್ಳುವ ಈ ಸಸ್ಯವು ಸಾಮಾನ್ಯವಾಗಿ ಎರಡರಿಂದ–ಎರಡೂವರೆ ಮೀಟರ್ ಎತ್ತರ ಬೆಳೆಯುತ್ತದೆ. ಬಿಳಿ, ಕೆಂಪು ಮಿಶ್ರಿತ ಬಿಳಿ ಹಾಗೂ ಬಿಳಿ ಮಿಶ್ರಿತ ಹಳದಿ ಬಣ್ಣದ ಕೊಳವೆಯಾಕಾರದ ಹೂವುಗಳು ಇರುತ್ತವೆ. ಮುಳ್ಳುಗಳ ಹೊರಮೈ ಹೊಂದಿರುವ ಸಣ್ಣ ಸಣ್ಣ ಕಾಯಿಗಳನ್ನೂ ಕಾಣಬಹುದು. ಹೀಗೆ ಬೇಗ ಬೆಳೆದು ಹೂಬಿಟ್ಟು ಕಾಯಿಯಾಗಿ ಹಣ್ಣಾಗಿ ಮತ್ತೆ ಬಿಸಿಲು ಬರುವ ಸಮಯದಲ್ಲಿ ಕಾಣೆಯಾಗುವ ಇದು ಒಂದು ಅಲ್ಪಾವಧಿ ಸಸ್ಯ.



ಇದರ ಎಲೆ, ಹೂ, ಕಾಯಿಗಳನ್ನು ಗ್ರಾಮೀಣ ಪ್ರದೇಶದ ಜನ ಹಲವು ರೀತಿಯ ಕಾಯಿಲೆಗಳಿಗೆ ಔಷಧಿಯಾಗಿ ಉಪಯೋಗಿಸುತ್ತಾರೆ. ಇದರ ಎಲೆಯು ಉತ್ತಮ ಬಾವು (ಬೀಗು) ನಿವಾರಕವಾಗಿದೆ. ಮುಖ್ಯವಾಗಿ ಗಂಟಲು ನೋವಿಗೆ, ಗಂಟಲು ಬಾವುಗೆ, ಗದ್ದ ಮಾರಿ ಅಥವ ಕೆಪ್ಪಟೆ ಬಾವಿನ ನಿವಾರಣೆಗೆ ಇದರ ಔಷಧಿ ರಾಮಬಾಣ.

ಮಣ್ಣಿನ ನೆಲದ ಮೇಲೆ ಬೆರಣಿಯಿಂದ ಬೆಂಕಿ ಉರಿಸಿ ಆ ಬೆಂಕಿಯಿಂದ ಕಾದ ನೆಲದ ಮೇಲೆ ಈ ಸಸ್ಯದ ಎಲೆಯ ರಸವನ್ನು ಹಾಕಿದರೆ ನೆಲದ ಕಾವಿಗೆ ರಸ ಕಾದು ಮರಳುತ್ತದೆ. ಹಾಗೆ ಕಾದ ರಸವನ್ನು ಬಿಸಿ ಬಿಸಿಯಾಗಿ ಕೆಪ್ಪಟೆ ಬಾವುಗೆ ಹಚ್ಚಬೇಕು. ಅಥವಾ ಕಾದ ಮಣ್ಣಿನ ಇಟ್ಟಿಗೆಯ ಮೇಲೆ ದತ್ತೂರದ ಎಲೆಯ ರಸವನ್ನು ಹಾಕಿದಾಗ ರಸವು ಕಾಯುತ್ತದೆ. ಈ ರಸವನ್ನು ಬಿಸಿಯಾಗಿಯೇ ಕೆಪ್ಪಟೆ ಬಾವುಗೆ ಹಚ್ಚಿದರೆ ಬೀಗು ಶಮನ.

ಬೊಕ್ಕ ತಲೆ ಮತ್ತು ಬಾಲನರೆ ಆಗುವುದಕ್ಕೆ ಇದರ ಎಲೆಯನ್ನು ತೆಂಗಿನಕಾಯಿಯ ಹಾಲಿನೊಂದಿಗೆ ರುಬ್ಬಿ ತಲೆಗೆ ಹಚ್ಚಿಕೊಂಡು ಎರಡು ಗಂಟೆ ಬಿಟ್ಟು ತೊಳೆದುಕೊಳ್ಳಬೇಕು. ಹೀಗೆ ಕ್ರಮಬದ್ಧವಾಗಿ ಮಾಡುತ್ತಾ ಬಂದರೆ ಉತ್ತಮ ಪರಿಹಾರ. ಇದರ ಎಲೆಯ ರಸವನ್ನು ಸೇರಿಸಿ ಕಾಯಿಸಿದ ಎಣ್ಣೆಯನ್ನು ತಲೆಕೂದಲಿಗೆ ಹಚ್ಚಿಕೊಳ್ಳುವುದರಿಂದ ಕೂದಲು ಕಪ್ಪಾಗುವುದಲ್ಲದೆ ಹೊಟ್ಟಿನ ಸಮಸ್ಯೆಯಿಂದಲೂ ಪಾರಾಗಬಹುದು. ಕಾಲಿನ ಹಿಮ್ಮಡಿ ನೋವಿನಿಂದ ಬಾಧಿದ್ದರೆ ದತ್ತೂರದ ಕಾಯಿಯನ್ನು ಕೆಂಡದಲ್ಲಿ ಸುಟ್ಟು ಅಥವಾ ನೀರಿನಲ್ಲಿ ಬೇಯಿಸಿ ನುಣ್ಣಗೆ ಅರೆದು ಬಿಸಿ ಮಾಡಿ ಲೇಪ ಹಾಕಿಕೊಂಡರೆ ನೋವು, ಬಾವು ಶಮನ. ದತ್ತೂರದ ಹೂವುಗಳನ್ನು ಒಣಗಿಸಿ ಮಾಡಿದ ಪುಡಿಯನ್ನು ಅಸ್ತಮಾಕ್ಕೆ ಔಷಧಿಯಾಗಿ ಉಪಯೋಗಿಸುತ್ತಾರೆ. ಉತ್ತಮ ನೋವು ನಿವಾರಕವಾದ ಇದನ್ನು ಮಲೇರಿಯಾ ಹಾಗೂ ಕಿವಿನೋವಿಗೆ ಔಷಧಿಯಾಗಿ ಬಳಸುತ್ತಾರೆ.

ಆದರೆ ಎಚ್ಚರ– ಇದರ ಬೀಜವು ವಿಷಪೂರಿತವಾದ್ದರಿಂದ ಯಾವುದೇ ಕಾರಣಕ್ಕೂ ಸೇವಿಸಲು ಯೋಗ್ಯವಲ್ಲ!

ವೇದಗಳ ಕಾಲದಲ್ಲಿ ಇದರ ಹೂವುಗಳನ್ನು ಶಿವಪೂಜೆಗೆ ಹೆಚ್ಚು ಬಳಸುತ್ತಿದ್ದರು ಎಂದು ಸಾಹಿತ್ಯಕೃತಿಗಳಲ್ಲಿ ಉಲ್ಲೇಖವಿದೆ. ಬೀಜಗಳಿಂದ ಇದರ ಸಸ್ಯಾಭಿವೃದ್ಧಿ ಮಾಡಬಹುದು. ಔಷಧಿಯಾಗಿ ಹಲವು ರೀತಿಯಲ್ಲಿ ಉಪಯೋಗವಿರುವ ಆಕರ್ಷಕ ಹೂವುಗಳಿಂದ ತುಂಬಿದ ಈ ಸಸ್ಯವನ್ನು ಹಿತ್ತಲಲ್ಲಿ, ಹೂತೋಟದಲ್ಲಿ, ಆವರಣಗೋಡೆಯ ಪಕ್ಕದಲ್ಲಿ ಬಹಳ ಸುಲಭವಾಗಿ ಹೆಚ್ಚು ಆರೈಕೆ ಇಲ್ಲದೆ ಬೆಳೆಸಬಹುದು. ಅದು ಅಲಂಕಾರವೂ ಆಗುತ್ತದೆ.

ಚಿತ್ರ ಲೇಖನ: ಗೀತಸದಾ ಮೋಂತಿಮಾರು